(ಎ) ಮಾರ್ಚ್ ೧೫-೧೬ ರ ಮಧ್ಯರಾತ್ರಿಯಲ್ಲೇ ಇನ್ನೊಂದು ಮನೆಗಳತನದ ಪ್ರಕರಣವೂ ನಡೆದಿದೆ. ಬಿ. ಕೆ. ಬಂಡಾರಿ ಎಂಬುವರ ಮನೆಯ ಹಿಂಭಾಗಿಲಿನ ಚಿಲಕವನ್ನು ತೆಗೆದು ದುಷ್ಕರ್ಮಿಗಳು ಒಳಗೆ ಪ್ರವೇಶಿಸಿ ಒಂದು ಗಡಿಯಾರ ಮತ್ತು ಸಿಹಳೇ ಷರ್ಟುಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ಕಳುವಾದ ಮಾಲಿಗಳ ಒಟ್ಟು ಬೆಲೆ ರೂ. ೫೦೦-೦೦.

ಮಾನ್ಯ ಸದಸ್ಯರು ಸೂಚಿಸಿರುವಂತೆ ಆಗಿರುವ ಅಪರಾಧಗಳು ಡಕಾಯಿತಿಯಲ್ಲ ಮನೆಗಳ್ಳತನಗಳು.

ಈ ರೀತಿಯ ಅಪರಾಧಗಳನ್ನು ತಡೆಗಟ್ಟಲು ಎಲ್ಲಾ ಪ್ರಯತ್ನವನ್ನು ಮಾಡಲಾಗುತ್ತಿದೆ. ವಿಶೇಷ ಗಸ್ತಿನ ವ್ಯವಸ್ಥೆ ಮಾಡಲಾಗಿದೆ ಪೂರ್ವ ಸಜಾ ಆದವರು ಇತ್ಯಾದಿ ಅಪರಾಧ ಪ್ರವೃತ್ತಿಯವರ ಮೇಲೆ ಹೆಚ್ಚಿನ ನಿಗಾ ಇಡಲು ಅಪರಾಧ ತನಿಖಾ ದಳಗಳನ್ನು ನಿರ್ಮಿಸಿ, ಅವರು ಸತತವಾಗಿ ಪ್ರಯತ್ನ ಮಾಡುತ್ತಿದ್ದಾರೆ.

14. ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಹಾಗೂ ಅರೆ ಕಾಲಿಕ ಶಿಕ್ಷಕರನ್ನು ಸೂಕ್ತ ವೇತನ ಶ್ರೇಣಿಯ ಮೇಲೆ ಪೂರ್ಣ ಕಾಲಿಕ ಶಿಕ್ಷಕರನ್ನಾಗಿ ನೇಮಿಸುವುದು.

ಶ್ರೀ ಜಿ. ಎಸ್. ಆಚಾರ್ —ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಸಿಬ್ಬಂದಿಗಳ ಕೊರತೆ, ಗುತ್ತಿಗೆ ಶಿಕ್ಷಕರಿಗೆ ಉದ್ಯೋಗ ಭದ್ರತೆ ಇಲ್ಲದಿರುವುದು ಒಂದು ಕಡೆಯಾದರೆ, ಸರಕಾರಿ ಪ್ರೌಢಶಾಲೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ದುಡಿಯುತ್ತಿರುವವರ ಗೋಳು ಇನ್ನೊಂದು ಕಡೆ. ಪೂರ್ಣ ಕಾಲಿಕ ಖಾಯಂ ಶಿಕ್ಷಕರಂತೆಯೇ ದುಡಿಯುತ್ತಿದ್ದರೂ ಈ ಅರೆಕಾಲಿಕ ಶಿಕ್ಷಕರ ಸಂಭಾವನೆ ತಿಂಗಳಿಗೆ ರೂಪಾಯಿಗಳು ನೂರು ಮಾತ್ರ. ಈ ರೀತಿ ದುಡಿಸಿಕೊಳ್ಳುವ ಕ್ರಮ ಪವಿತ್ರವಾದ ಶಿಕ್ಷಣ ಇಲಾಖೆಯಲ್ಲಲ್ಲದೆ ಬೇರೆಲ್ಲಿಯೂ ಇಲ್ಲ. ಅಂಗನವಾಡಿ ಶಿಕ್ಷಕಿಯರಿಗೂ ಕೂಡ ಇದಕ್ಕಿಂತ ಹೆಚ್ಚಿನ ಸಂಭಾವನೆ ಇದೆ. ಅರೆಕಾಲಿಕ ಶಿಕ್ಷಕರನ್ನು ಪೂರ್ಣಕಾಲಿಕ ಶಿಕ್ಷಕರನ್ನಾಗಿ ಪರಿವರ್ತಿಸಲು ಶಿಕ್ಷಣ ಇಲಾಖೆಯ ಆಯುಕ್ತರವರು ೧೮-೭-೮೭ ಮತ್ತು ೧೬-೧೧-೮೭ ರಂದು ಕೆಳಮಟ್ಟದ ಅಧಿಕಾರಿಗಳಿಗೆ ಪತ್ರ ಬರೆದು ವರದಿ ಸಂಗ್ರಹಿಸಿದ್ದರೂ ಸರಕಾರ ಸೂಕ್ತ ಕ್ರಮ ಕೈಗೊಂಡಿಲ್ಲ. ಅರೆಕಾಲಿಕ ಶಿಕ್ಷಕರನ್ನು ಬಿಡಂಗಡೆ ಮಾಡದೆ, 'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬ ಸಾಮಾಜಿಕ ನ್ಯಾಯದಂತೆ ಸೂಕ್ತ ವೇತನ ಶ್ರೇಣಿಯ ಮೇಲೆ ಪೂರ್ಣ ಕಾಲಿಕ ಶಿಕ್ಷಕರನ್ನಾಗಿ ನೇಮಿಸಲು ಕ್ಷಿಪ್ರ ಕಾರ್ಯಕ್ರಮ ಕೈಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ —ಮಾನ್ಯ ಅಧ್ಯಕ್ಷರೆ. ಇದರ ಬಗ್ಗೆ ಮಾಹಿತಿ ತರಿಸಿಕೊಡುತ್ತೇನೆ. ಈಗ ಅದಕ್ಕೆ ಕಾನೂನು ಇಲಾಖೆಯಲ್ಲಿ ಅಡಚಣೆಗಳು ಇರುವುದರಿಂದ ಸ್ವಲ್ಪ ಸಮಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

15. ಮೈಸೂರು ನಗರದ ವಾಣಿ ವಿಲಾಸ ಮೊಹಲ್ಲಾದಲ್ಲಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯದಲ್ಲಿ ಸಂರಜ್ಜಿತ ವ್ಯವಸ್ಥೆಗಳನ್ನು ಒದಗಿಸುವುದು.

ಶ್ರೀ ಎಂ. ಶಿವಣ್ಣ —ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ವಾಣಿ ವಿಲಾಸ ಮೊಹಲ್ಲಾದಲ್ಲಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಸರಕಾರಿ ವಿದ್ಯಾರ್ಥಿನಿ ನಿಲಯದಲ್ಲಿ ಪ್ರಾಥಮಿಕ ೫ ನೇ ತರಗತಿಯಿಂದ ಹಿಡಿದು ಪದವಿ ತರಗತಿಯವರೆಗೂ ಸುಮಾರು ೩೦೦ ಹೆಣ್ಣು ಮಕ್ಕಳು ವಾಸಿಸಿಗೆ ಮಾಡುತ್ತಿದ್ದಾರೆ ಈ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿನಿಯರಿಗೆ ಸೌಲಭ್ಯ ಒದಗಿಸಿರುವುದನ್ನು ನೋಡಿದಲ್ಲಿ ಸರಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಯರ ಮೇಲೆ ಎಷ್ಟರ ಮಟ್ಟಿನ ಕಾಳಜಿ ಹೊಂದಿದೆ ಎಂಬುದು ವ್ಯಕ್ತವಾಗುತ್ತದೆ. ಆಲ್ಲದೆ ಈ ಕಟ್ಟಡದಲ್ಲಿ ೩ ವಿದ್ಯಾರ್ಥಿನಿಲಯಗಳಿವೆ. ಈ ವಿದ್ಯಾರ್ಥಿನಿಲಯದಲ್ಲಿ ೩೦೦ ಹೆಣ್ಣುಮಕ್ಕಳಿಗಾಗಿರುವ ಶೌಚ ಗೃಹಗಳು ೪. ಅದರಲ್ಲಿ ಉಪಯೋಗಕ್ಕೆ ಬಾರದೆ ೨ ನ್ನು ಭದ್ರ ಮಾಡಿ ಪಂಚಚ್ಚಲಾಗಿದೆ. ಒಂದರ ಬಾಗಿಲು ಅರ್ಧ ಮಾತ್ರ ಇದ್ದು, ಒಂದೇ ಒಂದು ಶೌಚಗೃಹ ಉಪಯೋಗದಲ್ಲಿದೆ. ಈ ಮಕ್ಕಳು ಬೀದಿಗಳಲ್ಲಿ ಕುಳಿತು ಮಲ ಮೂತ್ರ ಮಾಡಬೇಕಾಗಿದೆ. ಅಲ್ಲಿರುವ ೭-೮ ಸ್ನಾನ ಗೃಹಗಳ ಪೈಕಿ ಒಂದು ಮಾತ್ರ ಉಪಯೋಗದಲ್ಲಿದ್ದು

ಉಳಿದವನ್ನು ಕೆಲಸಕ್ಕೆ ಬಾರದವು ಎಂಬುದಾಗಿ ಮುಚ್ಚಲಾಗಿದೆ. ಈ ಮಕ್ಕಳು ಕಾಂಪೌಂಡೊಳಗೆ ಅಥವಾ ವರಾಂಡದಲ್ಲಿ ಕುಳಿತು ಸ್ನಾನ ಮಾಡಬೇಕಾಗಿದೆ ಅಡಿಗೆ ಮನೆಯಂತೂ ಒಂದೇ ಕೊಠಡಿಯಲ್ಲಿದ್ದು ೨ ವಿದ್ಯಾರ್ಥಿನಿಲಯಗಳಿಗೆ ಸಂಬಂಧಿಸಿದಂತೆ ಅಡಿಗೆ ಮಾಡುವುದರಿಂದ ಹೊಗೆ ಸಹ ಹೊರಗೆ ಹೋಗದೆ ಉಸಿರು ಕಟ್ಟಿಸುವಂತೆ ಇದೆ. ಈ ವಿದ್ಯಾರ್ಥಿನಿಲಯಗಳ ವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರಿಗಳು ಅನೇಕ ವರ್ಷಗಳಿಂದಲೂ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದಾರೂ ಪರಿಸ್ಥಿತಿ ಇನ್ನೂ ಹಾಗೆಯೇ ಇದೆ. ಮಾನ ಮರ್ಯಾದೆಯಿಂದ ಬದುಕಬೇಕೆಂಬ ಈ ಹೆಣ್ಣು ಮಕ್ಕಳ ಪರಿಸ್ಥಿತಿ ಶೋಚನೀಯವಾಗಿದೆ. ಈ ವಿದ್ಯಾರ್ಥಿ ನಿಲಯದ ಸುಧಾರಣೆಗೆ ಸಮಾಜ ಕಲ್ಯಾಣ ಮಂತ್ರಿಗಳು ಕೂಡಲೇ ಕ್ರಮ ಕೈಕೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಉತ್ತರ ತರಿಸಿಕೊಡುತ್ತೇನೆ.

ಉಪಾಧ್ಯಕ್ಷರು.—ಶ್ರೀ. ಪೆಚ್. ಪಾಟೀಲ್.—ಗೈರು ಹಾಜರಿ.

16. ಅಂಕೋಲ ನಗರದಲ್ಲಿ ಸಾರಾಯಿ ಅಂಗಡಿಗಳಿಂದ ಸಾರ್ವಜನಿಕರಿಗೆ ತೊಂದರೆ ಯಾಗಿರುವುದು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೆ, ಅಂಕೋಲಾ ನಗರದಲ್ಲಿ ಐದು ಸಾರಾಯಿ ಅಂಗಡಿಗಳು ಸಾರ್ವಜನಿಕರಿಗೆ ತೊಂದರೆಯಾಗುವಂತಹ ಆಕ್ಷೇಪಾರ್ಹ ಸ್ಥಳದಲ್ಲಿವೆ ಎಂದು ತಿಳಿದು ಬಂದಿದೆ. ಸದರಿ ಅಂಗಡಿಗಳನ್ನು ಸ್ಥಳಾಂತರಿಸಲು ಸಾರ್ವಜನಿಕರಿಂದಲೇ ಅಲ್ಲದೆ. ಉತ್ತರಕನ್ನಡ ಜಿಲ್ಲೆಯ ಯುವ ಕಾಂಗ್ರೆಸ್ ಅಧ್ಯಕ್ಷ ಅರುಣ ನಾಡಕರ್ಣಿಯವರಿಂದ ಅಬಕಾರಿ ಅಧೀಕ್ಷಕರ ಕಚೇರಿ, ಕಾರವಾರ ಇವರಿಗೆ ದೂರುಗಳನ್ನು ಕಳುಹಿಸಲಾಗಿದೆ. ಆದರೆ ಅಬಕಾರಿ ಕಮೀಷನರ್ ಸುತ್ತೋಲೆ ನಂಬರ್ ಈಎಕ್ಸ್‌ಇ. ೧೭೭. ಐಎಂಎಲ್ (೧) ೮೭, ದಿನಾಂಕ ೬-೧೧-೧೯೮೭ರ ಪ್ರಕಾರ ಯಾವುದೇ ಮದ್ಯದಂಗಡಿಗಳನ್ನು ಅನುಜ್ಞಾಪನ ಪತ್ರದ ಅವಧಿ ನಡುವೆ ಸ್ಥಳಾಂತರಿಸಲು ತಡೆ ಇದೆ ಎಂದು ತಿಳಿಸಿದರು. ಈ ಉತ್ತರದಿಂದ ಅಸಮಾಧಾನಗೊಂಡವರು, ಉಚ್ಚನ್ಯಾಯಾಲಯಕ್ಕಾಗಲೀ, ಲೋಕಾಯುಕ್ತಕ್ಕಾಗಲಿ, ಸಾರ್ವಜನಿಕ ಹಿತದೃಷ್ಟಿಯಿಂದ ದೂರು ನೀಡುವ ಬಗ್ಗೆ, ಕೆಲವು ಕಾಗದ ಪತ್ರಗಳ ನಕಲು ಕೊಡುವಂತೆ ಅಬಕಾರಿ ಅಧೀಕ್ಷಕರವರ ಕಚೇರಿಗೆ ಬರೆದಿದ್ದಕ್ಕೆ ಅಧಿಕೃತ ರಹಸ್ಯ ಕಾಯಿದೆ ಪ್ರಕಾರ ಕಾಗದಪತ್ರಗಳನ್ನು ಕೊಡಲು ಬರುವುದಿಲ್ಲ ಎಂದು ತಿಳಿಸಲಾಗಿದೆ. ಸಾರ್ವಜನಿಕರ ಹಿತಕ್ಕಿಂತ, ಗುತ್ತಿಗೆದಾರರ ಹಿತವೇ ಮುಖ್ಯ ಎಂದು ಉತ್ತರ ಕನ್ನಡ ಜಿಲ್ಲೆಯ ಅಬಕಾರಿ ಅಧೀಕ್ಷಕರು ಭಾವಿಸಿರುವುದು ಇವರಿಂದ ವ್ಯಕ್ತವಾಗುತ್ತದೆ. ಸಾರ್ವಜನಿಕರಿಗೆ ತೊಂದರೆಯಾಗುವಂಥ ಸ್ಥಳದಲ್ಲಿ ಮದ್ಯದಂಗಡಿ ನಡೆಸಲು ಅನುಮತಿ ನೀಡಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿ, ಸದರಿ ಅಂಗಡಿಗಳನ್ನು ಮುಚ್ಚುವಂತೆ ಆಜ್ಞೆ ಹೊರಡಿಸಬೇಕೆಂದು ಸರಕಾರವನ್ನು ಒತ್ತಾಯಿಸಿ, ಈ ಬಗ್ಗೆ ಸದನದಲ್ಲಿ ಹೇಳಿಕೆ ನೀಡಬೇಕೆಂದು ಮಾನ್ಯ ಅಬಕಾರಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಅವರಿಂದ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅಧಿಕಾರಿಗಳಿಗೆ ಫೋನಿನಲ್ಲಿ ಕೇಳುವುದಕ್ಕಾಗುವುದಿಲ್ಲವೆ ? ಮಕ್ಕಳ ಕೈನಲ್ಲಿ ಕನ್ನಡ ಭಾಷೆ ಓದಿಸಿದಂತೆ ನಮ್ಮ ಕೈಯಲ್ಲಿ ಏತಕ್ಕೆ ಓದಿಸುತ್ತಾರೆ ?

ಖಾಸಗೀ ನಿರ್ಣಯ

ಲೆಜಿಸ್ಲೇಟರ್ಸ್ ಪವರ್ಸ್, ಪ್ರಿವಿಲೇಜಸ್ ಮತ್ತು ಇಮ್ಯೂನಿಟಿ ಬಿಲ್ ಬಗ್ಗೆ

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಾವೊಂದು ರೆಸಲ್ಯೂಷನ್ ಕಳುಹಿಸಿ ಕೊಟ್ಟಿದ್ದೇವೆ. ನಮ್ಮ ಉಪನಾಯಕರು ಕೂಡ ಪ್ರಸ್ತಾಪ ಮಾಡಿದ್ದರು. ಶಾಸಕರುಗಳಿಗೆ ಸಂಬಂಧ ಪಟ್ಟ ಪ್ರಿವಿಲೇಜಿಸ್ ಬಿಲ್ ಏನಿದೆ. ಅದನ್ನು ನಾವು ಶಾಸನ ಸಭೆಗೆ ಬಹಿಷ್ಕಾರ ಹಾಕಿದ ಸಂದರ್ಭದಲ್ಲಿ ಪಾಸು ಮಾಡಿಕೊಂಡಿದ್ದಾರೆ.